


ಪುನೇಕ: ಭೂತಾನದ ಪ್ರಾಚೀನ ವಿಹಾರ

ಸುತ್ತಿದ ಬೆಲ್ಟಿನಂತಹ ಟಾರಿನ ಹೆದ್ದಾರಿಯನ್ನು ಬಿಟ್ಟು ಕಣಿವೆಯಲ್ಲಿರುವ ಮಣ್ಣಿನ ಕಚ್ಚಾರಸ್ತೆಗೆ ಇಳಿಯುತ್ತಿದ್ದಂತೆ ಖುಷಿಯಾಯಿತು. ಲಬೋಸಾ ಮುಟ್ಟುವಾಗ ಸಂಜೆಯಾಗುತ್ತಿತ್ತು. ಅದೊಂದು ಬೆಟ್ಟಗಳ ಬುಡದಲ್ಲಿರುವ ಸಣ್ಣ ಹಳ್ಳಿ. ದೂರದ ಹಿಮಪರ್ವತದಲ್ಲಿ ಹುಟ್ಟಿದ ಹೊಳೆಯೊಂದು ಊರಬದಿ ಹರಿಯುತ್ತಿತ್ತು. ಊರನ್ನು ಸುತ್ತುವರೆದಂತೆ ಕಿರು ಬೆಟ್ಟಗಳು ಆವರಿಸಿ ಕೋಟೆ ಕೊಟ್ಟಿದ್ದವು. ನಡುವಣ ಮಟ್ಟಸವಾದ ವಿಶಾಲ ಕಣಿವೆಯಲ್ಲಿ ನೆಲ್ಲುಗದ್ದೆ. ಕಟಾವು ಮುಗಿದು ಕೂಳೆಬಿಟ್ಟ ಗದ್ದೆಗಳಲ್ಲಿ ಒಟ್ಟಿದ ಬಣವೆಗಳು, ಗದ್ದೆಗಳು ತಳೆದ ಘನಸ್ತನಗಳಂತೆ ಕಾಣುತ್ತಿದ್ದವು. ಕೆಲವು ಗದ್ದೆಯಲ್ಲಿ ತರಕಾರಿ ಬೆಳೆಯಲಾಗಿತ್ತು.



ಭೂತಾನದ ಒಂದು ಪಾರಂಪರಿಕ ಮನೆ



ಮೃತರ ಹೆಸರಲ್ಲಿ ನೆಟ್ಟಿರುವ ಮಂತ್ರಧ್ವಜಗಳು

ಒಂದು ಗುಂಡಿಯಲ್ಲಿ ಬಡಗಿಗಳು ಗರಗಸದಿಂದ ಮರ ಕೊಯ್ಯುತ್ತಿದ್ದರು. ತೊಲೆಗಳ ರಾಶಿ ಬಿದ್ದಿತ್ತು. ಹಿತ್ತಲುಗಳಲ್ಲಿ ಕೇಳುವವರು ದಿಕ್ಕಿಲ್ಲದೆ ಹಸಿರ ಲೈಟುಗಳಂತೆ ಸೀಮೆ ಬದನೆಕಾಯಿ ಇಳಿಬಿದ್ದಿದ್ದವು. ಸೀಬೆಮರಗಳು ಹಣ್ಣನ್ನು ನೆಲಕ್ಕೆ ಹಾಸಿದ್ದವು. ಸ್ಥಳೀಯ ಹಳದಿ ಹಣ್ಣಿನ ಗಿಡಗಳು ಎಲ್ಲ ಮನೆಗಳಲ್ಲೂ ಇದ್ದವು. ಊರು ಸುಭಿಕ್ಷವಾಗಿತ್ತು. ಸುಭಿಕ್ಷ ಶಬ್ದವು ಹುಟ್ಟಿದ್ದೇ ಭಿಕ್ಷುಗಳಿಗೆ ಸಮೃದ್ಧವಾಗಿ ಆಹಾರ ಸಿಗುವ ಹಿನ್ನೆಲೆಯಲ್ಲಿ. ಲಬೋಸಾದ ಪರಿಸರ ಸಮ್ಮೋಹಕವಾಗಿತ್ತು.

ನಾವು ಒಂದು ಸಣ್ಣ ಹೋಟೆಲಿನಲ್ಲಿ ವಸ್ತಿ ಮಾಡಿದೆವು. ಊರಿನ ಒಬ್ಬ ಹುಡುಗಿ ನಗರದಲ್ಲಿದ್ದ ನೌಕರಿ ಬಿಟ್ಟು, ಪೂರ್ವಜರ ಮನೆಯನ್ನೇ ಪ್ರವಾಸಿಗರಿಗೆ ಬೇಕಾದ ಅನುಕೂಲ ಕಲ್ಪಿಸಿ, ಹೋಂಸ್ಟೇ ನಡೆಸುತ್ತಿದ್ದಳು. ನಾವು ಟ್ಯಾಕ್ಸಿಯಿಂದ ಇಳಿದವರು, ರೂಮುಗಳಿಗೆ ಹೋಗದೆ ಕತ್ತಲಾಗುವ ಮುನ್ನವೇ ಹಳ್ಳಿ ನೋಡಲು ಹೊರಟೆವು. ಮೇಯಲು ಹೋಗಿದ್ದ ದನಗಳು ದೂಳೆಬ್ಬಿಸುತ್ತ ಊರೊಳಗೆ ಬರುತ್ತಿದ್ದವು. ಹಳೆಯ ಕೋಟೆಯಂತೆ ಕಾಣುವ ಪಾಳುಬಿದ್ದ ಮನೆಯ ಗೋಡೆಗಳು. ಅಲ್ಲಲ್ಲಿ ಮಲಗಿದ್ದ ನಾಯಿಗಳು. ಅಂಗಡಿಗಳ ಕಟ್ಟೆಯ ಮೇಲೆ ಕೂತ ಹಣ್ಣು ವೃದ್ಧರು. ಊರಿಗೆ ಯಾರೋ ಹೊಸಬರೆಂದು ಹೊರಬಂದು ಇಣುಕುವ ಮಹಿಳೆಯರು.

ವಿಶೇಷವೆಂದರೆ, ಲಬೋಸಾದ ಪ್ರತಿ ಮನೆಯ ಗೋಡೆಯ ಮೇಲೆ ಉದ್ರಿಕ್ತ ಶಿಶ್ನದ ಚಿತ್ರಗಳಿದ್ದವು. ಕೆಲವಕ್ಕೆ ಮನುಷ್ಯ ಮುಖವೂ ಇದ್ದು ಅವು ಹಲ್ಲುಬಿಟ್ಟು ನಗುತ್ತಿದ್ದವು. ನಾವು ಭೂತಾನದ ಎರಡು ದೊಡ್ಡ ನಗರಗಳಾದ ಥಿಂಪು ಮತ್ತು ಪಾರೊವಿನ ಅಂಗಡಿಗಳಲ್ಲಿ ಕಟ್ಟಿಗೆಯ ಪುಟ್ಟಪುಟ್ಟ ಶಿಶ್ನಗಳನ್ನು ನೇತುಹಾಕಿದ್ದು ಕಂಡಿದ್ದೆವು. ಟ್ಯಾಕ್ಸಿಯಲ್ಲಿ ನೇತುಹಾಕಿದ್ದ ತಾಯಿತದಂತಹ ವಸ್ತುಗಳಲ್ಲಿ ಮರದ ಪುಟ್ಟಶಿಶ್ನವೂ ಇತ್ತು. ಅನೇಕರು ಕೊರಳೊಳಗೂ ಧರಿಸಿದ್ದರು. ಅದು ಕೆಲವರ ಕೀಚೈನಲ್ಲಿತ್ತು. ಇವುಗಳ ಮೂಲ ಲಬೋಸಾ ಎಂದು ಗೊತ್ತಿರಲಿಲ್ಲ. ಊರಲ್ಲಿದ್ದ ಕರಕುಶಲ ವಸ್ತುಗಳನ್ನು ಮಾರುವ ಅಂಗಡಿಗೆ ಹೋದೆವು. ಅದರ ತುಂಬ ವಿವಿಧ ಆಕಾರದ ಮತ್ತು ಬಣ್ಣದ ಶಿಶ್ನಗಳು. ಅಂಗಡಿಯ ಹುಡುಗ ನಮ್ಮ ವಿಸ್ಮಯಚಕಿತ ಮುಖವನ್ನು ಕಂಡು 'ಸರ್, ಪ್ಲೀಸ್ ಕಮ್‌ಇನ್, ಹ್ಯಾವ್ ಎ ಲುಕ್' ಎಂದು ಆಹ್ವಾನಿಸಿದನು. ಇಲ್ಲಿನ ಜನರಿಗೆ ಈ ಚಿತ್ರ ಮತ್ತು ಕಾಷ್ಠಶಿಲ್ಪಗಳ ಬಗ್ಗೆ ಯಾವುದೇ ಮುಜುಗರವಿರಲಿಲ್ಲ. ಬದಲಿಗೆ ನಮ್ಮ ಸೋಜಿಗದ ಮಜಾ ತೆಗೆದುಕೊಳ್ಳುತ್ತಿದ್ದರು. ಹೋಟೆಲು ಮತ್ತು ಮನೆಗಳಲ್ಲಿ ಯೂರೋಪಿಯನ್ನರೊ ಅಮೆರಿಕನ್ನರೊ ಬಿಡಾರ ಹೂಡಿದ್ದರು. ಲಬೋಸಾ ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿತ್ತು. ನಿಗೂಢವಾದುದನ್ನು ಪವಿತ್ರವಾದುದನ್ನು ಪ್ರೇಕ್ಷಣೀಯ ಮಾಡುವುದು ಟೂರಿಸಂನ ಗುಣ. ಅದರ ಪಾವಿತ್ರ್ಯ ಅಳಿಸಿ ಮಾರುಕಟ್ಟೆಯ ಸರಕಾಗಿಸುವ ತನಕ ಅದಕ್ಕೆ ವಿರಾಮವಿಲ್ಲ.

ಊರ ಹೊರಗೆ ನದೀತಟದಲ್ಲಿ ಸಣ್ಣ ಬೆಟ್ಟವಿತ್ತು. ಸುತ್ತಮುತ್ತ ಆವರಿಸಿದ ಬೃಹದಾಕಾರದ